ಟೀಕೆಯನ್ನು ಗಡಿಯಲ್ಲಿರುವ ನಮಗೆ ಜನರಿಂದ ಕೇಳಿ ತಲೆ ತಗ್ಗಿಸುವ ಪ್ರಸಂಗ ಕೂಡ ಬರುತ್ತದೆ. ಕಾರಣ ಕೂಡಲೇ ಈ ವಿಷಯದಲ್ಲಿ ಸಂಬಂಧಿತ ಅಧಿಕಾರಿಗಳಿಗೆ ಆದೇಶ ನೀಡಿ ಸದನದಲ್ಲಿ ಹೇಳಿಕೆ ನೀಡುವಂತೆ ಲೋಕೋಪಯೋಗಿ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).— ಮಾನ್ಯ ಅಧ್ಯಕ್ಷರೇ, ಸಂಕೇಶ್ವರ ಗಡಹಿಂಗ್ಲಜ್ ಮಂಜಾರಾಪ್ಪ ಗಡಿಯ ತನಕ ಇರುವ ರಸ್ತೆಯ ಅಭಿವೃದ್ಧಿ ಕೆಲಸವು ಕೆ ಲಕ್ಷ ರೂಪಾಯಿಗಳ ಅಂದಾಜು ಮೆಚ್ಚದಲ್ಲಿ ಮಂಜೂರಾಗಿದ್ದು, ಕೆಲಸವು ನಡೆಯುತ್ತಿದೆ. ಮಣ್ಣಿನ ಕೆಲಸ ಮತ್ತು ಜಲ್ಲಿ ಕೆಲಸ ಮುಗಿದಿದ್ದು, ಡಾಮರು ಹಾಕುವ ಕೆಲಸವು ಬಾಕಿ ಇದೆ. ಈ ಕೆಲಸಕ್ಕೆ ೧೯೮೬-೮೭ರ ಸಾಲಿನಲ್ಲಿ ೧.೫೦ ಲಕ್ಷ ರೂಪಾಯಿಗಳ ಅನುದಾನವಿದೆ ಡಾಮರು ಕೆಲಸವನ್ನು ಆದಷ್ಟು ಬೇಗ ಮಂಗಿಸಲಾಗುವುದು.

೭. ರಾಜಾಜಿನಗರದ ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಮಿಲ್ಕ್ ಕಾಲೋನಿಯಲ್ಲಿ ಪೋಲೀಸ್ ಬೀಟ್ ವ್ಯವಸ್ಥೆ ಮಾಡುವುದರ ಬಗ್ಗೆ

ಶ್ರೀ ಬಿ. ಲಕ್ಕಪ್ಪ.— ಬೆಂಗಳೂರು ನಗರದ ರಾಜಾಜಿನಗರದ ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಮಿಲ್ಕ್ ಕಾಲೋನಿಯಲ್ಲಿ ಕಳೆದ ಕೆಲವು ತಿಂಗಳುಗಳಲ್ಲಿ ೨ ಕೊಲೆ ನಡೆದಿದ್ದರೂ ಪೋಲೀಸರು ಬೀಟ್ ಬರುತ್ತಿಲ್ಲ. ಸದರಿ ಪ್ರದೇಶದಲ್ಲಿ ಆಗಾಗ್ಗೆ ಘರ್ಷಣೆಗಳಾಗುತ್ತಿರುತ್ತದೆ. ಇದೆಲ್ಲಕ್ಕೂ ಆಲ್ಲಿನ ಕೆಲವು ಪುಂಡಪೋಕರಿಗಳೇ ಕಾರಣ. ಇದಂ ಪೋಲೀಸ್‌ನವರಿಗೆ ತಿಳಿದಿದ್ದರೂ ಪುಂಡಪೋಕರಿಗಳನ್ನು ಸರಿಯಾಗಿ ಶಿಕ್ಷಿಸದ ಕಾರಣ, ಘರ್ಷಣೆಗಳು ಈಗಲೂ ನಡೆಯುತ್ತಿವೆ. ಈ ಘರ್ಷಣೆಗಳಿಗೆಲ್ಲಾ ಮೂಲಸ್ಥಾನ-ಮಿಲ್ಕ್ ಕಾಲೋನಿ ಮುಖ್ಯ ರಸ್ತೆಯಲ್ಲಿರುವ ಹೋಟೆಲ್, ಬಸ್ ಸ್ಟಾಪ್‌ನಲ್ಲಿ ಪೋಕರಿಗಳು ತಮಗೆ ಬೇಕಾದಂತೆ ಕಟ್ಟಿಕೊಂಡಿರುವ ಕಲ್ಲಂ ಬೆಂಚುಗಳು ಹಾಗೂ ಸದರಿ ಬಡಾವಣೆಯ ಶಿನೇ ಕ್ರಾಸಿನಲ್ಲಿರುವ ಎರಡು ಅಂಗಡಿಗಳ ಹತ್ತಿರದ ಜಾಗ, ಇಲ್ಲಿಂದಲೇ ಅವರ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಈ ಮೇಲ್ಕಾಣಿಸಿದ ಬಸ್ ಸ್ಟಾಪಿನಲ್ಲಿ ಹಾಗೂ ಅಂಗಡಿಗಳ ಅಕ್ಕಪಕ್ಕದಲ್ಲಿ ಪುಂಡರು ಸದಾ ಕಾಲವೂ ಜಮಾಯಿಸಿ ದಾರಿಯಲ್ಲಿ ಹೋಗಿಬರುವ ಹೆಣ್ಣು ಮಕ್ಕಳನ್ನು ಚುಡಾಯಿಸುವುದು ಸಾಮಾನ್ಯ ಸಂಗತಿಯಾಗಿದ್ದು, ಈ ರಸ್ತೆಯಲ್ಲಿ ಹೆಣ್ಣು ಮಕ್ಕಳು ತಿರುಗಾಡುವುದೇ ಕಷ್ಟವಾಗಿದೆ. ಆದ್ದರಿಂದ ಮೇಲ್ಕಂಡ ಬಡಾವಣೆಯ ಸದರಿ ಪ್ರದೇಶಗಳಲ್ಲಿ ಪುಂಡರು ಕುಳಿತುಕೊಳ್ಳುವುದನ್ನು ತೆಡೆಗಟ್ಟುವುದಲ್ಲದೆ, ಮಿಲ್ಕ್ ಕಾಲೋನಿಯಲ್ಲಿನ ಪುಂಡರ(ರೌಡಿಗಳ) ಹೊಸ ಪಟ್ಟಿಯನ್ನು ತಯಾರಿಸಿ ಗಲಭೆಗಳ ಮುನ್ಸೂಚನೆ ದೊರೆತಾಗ ಅವರನ್ನು ಬಂಧಿಸುವಂತೆ ಹಾಗೂ ನಿತ್ಯವೂ ಮೇಲ್ಕಂಡ ಬಡಾವಣೆಗೆ ಪೋಲೀಸರು ಬೀಟ್ ಬರುವಂತೆ ವ್ಯವಸೆ ಮಾಡುವ ಬಗ್ಗೆ ಸರ್ಕಾರವನ್ನು ಒತ್ತಾಯಿಸುತ್ತಾ ಈ ಬಗ್ಗೆ ಹೇಳಿಕೆ ನೀಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯ ಸರಹದ್ದಿನಲ್ಲಿ ಬರುವ ಮಿಲ್ಕ್ ಕಾಲೋನಿಯಲ್ಲಿ ಜಾಸ್ತಿ ಸರ್ಕಾರಿ ನೌಕರರು ಮತ್ತು ಕಾರ್ಮಿಕರು ವಾಸವಾಗಿರುತ್ತಾರೆ. ಮಿಲ್ಕ್ ಕಾಲೋನಿಯಲ್ಲಿ ರೌಡಿಗಳು ಇರುವುದು ಕಂಡುಬಂದಿಲ್ಲ. ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿ ೯ ವ್ಯಕ್ತಿಗಳ ಮೇಲೆ ರೌಡಿಗಳೆಂಬ ಆಪಾದನೆ ಇದ್ದು, ಅವರ ಪಟ್ಟಿಯನ್ನು ತಯಾರಿಸಲಾಗಿದೆ. ಇವರೆಲ್ಲರೂ ಮಿಲ್ಕ್ ಕಾಲೋನಿಯವರಾಗಿದ್ದು ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆಯಲ್ಲಿರುವ ಪಟ್ಟಿಯಲ್ಲಿರುವವರು. ಇವರ ಬಗ್ಗೆ ಸೂಕ್ತ ನಿಗಾ ಇಟ್ಟಿರುವುದಲ್ಲದೆ ಭಾರತ ದಂಡ ಸಂಹಿತೆ ಕಲಂ ೧೫೧ನ್ವಯ ಮೊಕದ್ದಮೆಯನ್ನು ಹೂಡಲಾಗಿ ಅವರು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗದಂತೆ ಜಾಮೀನು ಪಡೆಯಲಾಗಿದೆ ರೌಡಿ ಪಟ್ಟಿಯನ್ನು ಪುನರ್ವಿಮರ್ಶಿಸಿ ಹೊಸದಾಗಿ ರೌಡಿ ಪಟ್ಟಿಯನ್ನು ತಯಾರಿಸುವಾಗ ಮಾನ್ಯ ಸದಸ್ಯರು ಹೇಳಿದ್ದನ್ನು ಪರಿಗಣಿಸಲಾಗುವುದು ಮತ್ತು ಅಂಥ ವ್ಯಕ್ತಿಗಳು ಇದ್ದಲ್ಲಿ ಅವರನ್ನು ರೌಡಿ ಪಟ್ಟಿಯಲ್ಲಿ ಸೇರಿಸಲಾಗುವುದು. ಹಾಲಿ ಮಿಲ್ಕ್ ಕಾಲೋನಿಯಲ್ಲಿ ಯಾವ ತರಹದ ರೌಡಿ ಚಟುವಟಿಕೆಗಳು ಇಂವುದಿಲ್ಲ. ಇದರ ಬಗ್ಗೆ ಜನರಿಂದ ಯಾವ ದೂರುಗಳೂ ಬಂದಿರುವುದಿಲ್ಲ.